# ಕರುಳ ಕುಡಿಯ ಮಣ್ಣಿಗಿಟ್ಟು, ನಗರದಲ್ಲಿ ಹೊಸ ಹುಟ್ಟು

ತಿಪ್ಪೆಯ ಮೇಲಿದ್ದವನನ್ನು ಉಪ್ಪರಿಗೆಗೆ, ಉಪ್ಪರಿಗೆಯ ಮೇಲಿದ್ದವನನ್ನು ತಿಪ್ಪೆಗೆ ಏರಿಳಿಸಲು ವಿಧಿಗೆ ಎಷ್ಟು ಹೊತ್ತು? ಚಿಟಿಕೆ ಹೊಡೆಯುವಷ್ಟು? ಅಥವಾ ಅಷ್ಟೂ ಬೇಡವೇನೋ.

ಶಿವರಾಮ, ಸೀತಾಲಕ್ಷ್ಮಿ ದಂಪತಿಯ ಎರಡನೆಯ ಮಗ ಪ್ರದೀಪ ಬಿ.ಎ. ಮಾಡಿ, ಎಂ.ಎ. ಮಾಡಿ ದಿನಾ ಓಡಾಡುವಷ್ಟು ಹತ್ತಿರದ ಕಾಲೇಜಿನಲ್ಲಿ ಮೇಷ್ಟ್ರಾಗಿ ಸೇರಿಕೊಳ್ಳುತ್ತೇನೆ ಎನ್ನುವ ಕನಸು ಕಟ್ಟಿಕೊಂಡಿದ್ದ ಯುವಕ. ಸ್ವಲ್ಪ ವೆಂಕಟರಾಮುವನ್ನು ಹೋಲುವ ಸ್ವಭಾವ. ಅಮ್ಮನ ಹಿಂದೆ ಹಿಂದೆ ಓಡಾಡುತ್ತಾ, ಅಡುಗೆ ಮನೆಯ ಕೆಲಸ ಮಾಡಿಕೊಡುತ್ತಾ, ಕಾಯಿ ತುರಿಯಲು ಕೂತರೆ ಒಂದಿಷ್ಟು ಮುಕ್ಕುತ್ತಾನೆ. ತಿನ್ನುವ ತರಕಾರಿಯಾದರೆ ಸ್ವಾಹಾ ಮಾಡುತ್ತಾನೆ, ಅಮ್ಮನ ಹತ್ತಿರ ಅಷ್ಟೆಲ್ಲಾ ತನ್ನ ಕನಸುಗಳ ಬಗ್ಗೆ ಕೊಚ್ಚಿ ಕೊಚ್ಚಿ ಇಳಿಸುವ ಹುಡುಗ ಅಪ್ಪ ಒಳಗೆ ಬಂದರೆ ಗಪ್ ಚುಪ್. ಮಕ್ಕಳು ಏನು ಹೇಳಿಕೊಳ್ಳುವುದಿದ್ದರೂ ಅಮ್ಮನ ಹತ್ತಿರ. ಪ್ರಸನ್ನ ಕೆಲಸಕ್ಕೆ ಸೇರಿಕೊಂಡ ಮೇಲೆ ಅಪರೂಪಕ್ಕೆ ಮನೆಗೆ ಬರುತ್ತಿದ್ದನಲ್ಲ, ಅಪ್ಪನಿಗೆ ಮುಖ ಕೊಟ್ಟು ಮಾತಾಡುವಷ್ಟು ಬದಲಾಗಿದ್ದು ಆ ನಂತರವೇ. ಮಗ ಬಾಯ್ತುಂಬಾ ಮಾತಾಡಿಸುತ್ತಿದ್ದರೆ ಶಿವರಾಮನಿಗೆ ಹೃದಯ ತುಂಬಿ ಬಂದ ಅನುಭವ. ದೇವರು ಎರಡೂ ಕೈಲಿ ಕೊಟ್ಟಿದಾನೆ. ಇನ್ನೇನೂ ಬೇಡ ಎಂದು ಅವನು ಪರಮ ಸಂತೃಪ್ತಿಯಿಂದಿರುವಾಗ ಮನೆಯವರ ಊಹೆಗೂ ಮೀರಿದ ಒಂದು ದುರ್ಘಟನೆ ಆ ಮನೆಯಲ್ಲಿ ಸಂಭವಿಸಿತು. ಜನ್ಮಪೂರ್ತಿ ಚೇತರಿಸಿಕೊಳ್ಳಲಾಗದಂಥ ಹೊಡೆತ.

ಅವತ್ತು ಜೂನ್ ತಿಂಗಳ ಒಂದು ಭಾನುವಾರ. ಆಗಷ್ಟೇ ಶುರುವಾಗಿದ್ದ ಕಾಲೇಜಿಗೆ ಆ ದಿನ ರಜಾ. ತೋಟದಲ್ಲಿ ಒಂದು ಸುತ್ತು ಹಾಕಿ ಬರುತ್ತೇನೆ ಎಂದು ಕೈಲೊಂದು ಕತ್ತಿ ಹಿಡಿದು ತೋಟಕ್ಕೆ ಹೋಗಿದ್ದ ಪ್ರದೀಪ. ಹಿರಿಯವನಂತಲ್ಲ ಇವನು. ಮಣ್ಣಿನ ಸೆಳೆತ ಜಾಸ್ತಿ. ಮಳೆಗಾಲ ಶುರುವಾಗಿದ್ದರೂ ಬಿಡದೆ ಹೊಡೆಯುವಷ್ಟು ಅಬ್ಬರ ಇರಲಿಲ್ಲ. 'ಬರ್ತಾ ನಾಕು ಬಾಳೆಲೆ...' ಅಂದಿದ್ದಳು ಸೀತಾಲಕ್ಷ್ಮಿ. 'ನಾಕು ವೀಳೆದೆಲೆ...' ಅಂದಿದ್ದ ಶಿವರಾಮ. ಬೆಳಿಗ್ಗೆ ಹನ್ನೊಂದಕ್ಕೆ ಮನೆ ಬಿಟ್ಟು ಹೋದವನು ಮಧ್ಯಾಹ್ನ ಗಂಟೆ ಒಂದಾಗಿ, ಊಟಕ್ಕೆ ಬಾಳೆ ಹಾಕುವ ಹೊತ್ತಾದರೂ ಪತ್ತೆ ಇಲ್ಲ. 'ಅಲ್ಲೇ ಬೇರು ಬಿಟ್ಟಿದಾನಾ ಅಂತ? ಪನ್ನೇರಲೆ, ಪೇರಲೆ ಹೊಟ್ಟೆ ತುಂಬಾ ತಿಂದ್ರೆ ಹಸು ಆಗುತ್ತಾ? ಹೊತ್ತಿನ ಜ್ಞಾನಾನೇ ಇಲ್ಲ...' ಗೊಣಗುಟ್ಟಿಕೊಂಡಿದ್ದಳು ಸೀತಾಲಕ್ಷ್ಮಿ. 'ಒಂದು ಹೆಜ್ಜೆ ಹೋಗಿ ನೋಡ್ಕಂಬನ್ರೀ. ಎರಡು ಬಿಗಿದು ಕರ್ಕಂಬನ್ನಿ..' ಸದರದಿಂದ ಹೇಳಿದ್ದಳು.

ಅವತ್ತು ಗಂಡ, ಹೆಂಡತಿ ಯಾವ ಗಳಿಗೆಯಲ್ಲಿ ಎದ್ದಿದ್ದರೋ, ನಗುನಗುತ್ತಾ ಮನೆಯಿಂದ ಹೊರಟಿದ್ದ ಮಗ ಉಸಿರು ಕಳೆದುಕೊಂಡು ಮನೆ ತಲುಪಿದ್ದ. ಆಳುಗಳಿಬ್ಬರು ಮನೆಯವರೆಗೆ ಹೊತ್ತುಕೊಂಡು ತಂದಿದ್ದರು. ಕೈ ಕಡೆಗೊಬ್ಬರು, ಕಾಲಿನ ಕಡೆಗೊಬ್ಬರು ಎತ್ತಿಕೊಂಡು ಬರುವುದನ್ನು ನೋಡಿಯೇ ಸೀತಾಲಕ್ಷ್ಮಿ ದಿಕ್ಕುಗಳು ಮಾರ್ಮೊಳಗುವಂತೆ ಕಿರುಚಿಕೊಂಡಿದ್ದಳು. ಮಗನ ಅಪ್ಪ ಆಳುಗಳ ಬೆನ್ನ ಹಿಂದೆ ಕಾಲೆಳೆದು ಹಾಕುತ್ತಾ ಬರುತ್ತಿದ್ದ. ಮುಖ ರಾವು ಹೊಡೆದಂತೆ ಕರಿಗಟ್ಟಿತ್ತು. ಏನಾಯ್ತು, ಎಂತಾಯ್ತು ಯಾರಿಗೂ ಗೊತ್ತಿಲ್ಲ. ಕಾಲುಹಾದಿಯಲ್ಲಿ ಅರ್ಧ, ತೋಟಕ್ಕೆ ನೀರು ಹರಿಯುವ ಕಾಲುವೆಯಲ್ಲಿ ಅರ್ಧ ದೇಹ ಮಕಾಡೆ ಬಿದ್ದಿತ್ತು. ಮುಖ ನೀರಿನಲ್ಲಿ ಅದ್ದಿ ಹೋಗಿತ್ತು. ಕೈಲಿದ್ದ ಕುಡುಗೋಲು ಪಕ್ಕೆಗೆ ತಿವಿದು ರಕ್ತ ಹರಿಯುತ್ತಿತ್ತು. ಮಳೆಗಾಲದ ಜಾರಿಕೆ ಜಾಗ. ಕಾಲು ಜಾರಿ ಬಿದ್ದಿದ್ದಾನೆ. ಕೈಲಿ ಕತ್ತಿ ಇದ್ದಿದ್ದು ಅನಾಹುತ ಆಯ್ತು. ಹರಿತದ ಕತ್ತಿ ಚುಚ್ಚಿದ ರಭಸಕ್ಕೆ ಎಚ್ಚರ ತಪ್ಪಿದೆ. ನೀರಲ್ಲಿ ಮುಳುಗಿ ಉಸಿರು

